2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಪಿ.ಪ್ರಕಾಶ್: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಉಪಮುಖ್ಯಮಂತ್ರಿಗಳವರ ಪರವಾಗಿ: ಭಾರತದ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1. 1997-98 ನೇ ಸಾಲಿನ ಧನವಿನಿಯೋಗ ಲೆಕ್ಕಪತ್ರಗಳು;

2. 1997-98ನೇ ಸಾಲಿನ ಹಣಕಾಸು ಲೆಕ್ಕಪತ್ರಗಳು; ಹಾಗೂ

3. 1998ನೇ ಇಸವಿಯ ಮಾರ್ಚ್ 31ರಂದು ಕೊನೆಗೊಂಡ ವಾರ್ಷಿಕದ ಬಗ್ಗೆ ಭಾರತ ನಿಯಂತ್ರಕರು ಹಾಗೂ ಮಹಾಲೇಖಪಾಲಕರ ವರದಿ ನಂ. 3(ಸಿವಿಲ್).

ಮಂಡಿಸಲಾಯಿತು.

3. ವರದಿಗಳನ್ನೊಪ್ಪಿಸುವುದು

ಅ) ಶ್ರೀಮತಿ ಪ್ರಮೀಳಾ ನೇಸರ್ಗಿ(ಅಧ್ಯಕ್ಷರು, ಜಂಟಿ ಸದನ ಸಮಿತಿ)ಅವರು: ರಾಜ್ಯದಲ್ಲಿ ಮಹಿಳೆಯರ ಮೇಲೆ ಆಗಿಂದಾಗ್ಗೆ ನಡೆಯುತ್ತಿರುವ ದೌರ್ಜನ್ಯ ಹಾಗೂ ವರದಕ್ಷಿಣೆ ಸಾವಿನ ಬಗ್ಗೆ ಪರಿಶೀಲಿಸಿ ಇಂತಹ ಪ್ರಕರಣಗಳನ್ನು ಕಡಿಮೆ ಮಾಡಲು ಕಾನೂನುಗಳಿಗೆ ಸೂಕ್ತ ತಿದ್ದುಪಡಿ ಹಾಗೂ ಅವುಗಳ ಯಶಸ್ವಿ ಅನುಷ್ಠಾನಕ್ಕೆ ಸೂಕ್ತ ಸಲಹೆಗಳೊಂದಿಗೆ ವರದಿ ಸಲ್ಲಿಸಲು ರಚಿಸಲಾದ ಜಂಟಿ ಸದನ ಸಮಿತಿಯ ವರದಿಯನ್ನೊಪ್ಪಿಸುತ್ತೇನೆ.

ಆ) ಶ್ರೀ ಎ.ಆರ್.ಕೃಷ್ಣಮೂರ್ತಿ (ಅಧ್ಯಕ್ಷರು, ಸಾರ್ವಜನಿಕ ಉದ್ಯಮಗಳ ಸಮಿತಿ) ಅವರು: ಸಾರ್ವಜನಿಕ ಉದ್ಯಮಗಳ ಸಮಿತಿಯ 81, 82 ಮತ್ತು 83ನೇ ವರದಿಗಳನ್ನೊಪ್ಪಿಸುತ್ತೇನೆ.

ವರದಿಗಳನ್ನು ಒಪ್ಪಿಸಲಾಯಿತು.

ಅಧ್ಯಕ್ಷರು: ಶ್ರೀ ನಾರಾಯಣಸ್ವಾಮಿ ಮತ್ತು ಬಾಲಕೃಷ್ಣ ಅವರು ನಲ್ಲಿಸಿರುವ ನಿಲುವಳಿ ಸೂಚನೆ ಹಾಗೆ ತೆಗೆದುಕೊಳ್ಳಲು ಬರುವುದಿಲ್ಲ. ಅವನ್ನು ಪ್ರತ್ಯೇಕ ಪ್ರಸ್ತಾಪದೊಡನೆ ಮಾಡಬೇಕಾಗಿದೆ.

ಶ್ರೀ ಬಾಲಕೃಷ್ಣ: ಅದನ್ನು ಗಮನಸೆಳೆಯುವ ಸೂಚನೆ ಮೂಲಕವೂ ಕೊಟ್ಟಿದೆ.

ಅಧ್ಯಕ್ಷರು: ಅವಕಾಶ ಮಾಡಿಕೊಡುತ್ತೇವೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

ವಿಷಯ: (ಅ) ಗುಲ್ಬರ್ಗ, ಚಿಂಚೋಳಿ, ಬಸವಕಲ್ಯಾಣ ಸ್ಟೇಟ್ ಹೈವೆ ರಸ್ತೆಯಲ್ಲಿನ ದೊಡ್ಡ ಸೇತುವೆ ಬಿದ್ದು ಹೋಗಿರುವುದು.

ಶ್ರೀ ರೇವು ನಾಯಕ್, ಬೆಳಮಗಿ (ಕಮಲಾಪುರ): ಅಧ್ಯಕ್ಷರೇ, ಮೊನ್ನೆಯ ಅತಿವೃಷ್ಟಿಯಿಂದ ನನ್ನ ಕ್ಷೇತ್ರದಲ್ಲಿನ ಗುಲ್ಬರ್ಗ-ಚಿಂಚೋಳಿ-ಬಸವಕಲ್ಯಾಣ ಸ್ಟೇಟ್ ಹೈವೆ ರಸ್ತೆಯಲ್ಲಿನ ಒಂದು ದೊಡ್ಡ ಸೇತುವೆ ಬಿದ್ದುಹೋಗಿದೆ. ಎಲ್ಲ ಜನ ಮಾತನಾಡುತ್ತಿದ್ದಾರೆ. ಬಹಳ ಸಲ ಅರ್ಜಿನೂ ಕೊಟ್ಟಿದ್ದೇನೆ. ಅಲ್ಲಿನ ಪಿಡಬ್ಲ್ಯೂಡಿ ಎಕ್ಸಿಕ್ಯುಟೀವ್ ಇಂಜಿನಿಯರ್ ಹಾಗೂ ಎಇಇ ಅವರನ್ನು ಭೇಟಿಯಾಗಿದ್ದೇನೆ. ಅವರು ಎಸ್ಟಿಮೇಟ್ ಮಾಡಿದ್ದೇನೆ, ಆಗುತ್ತದೆ ಎಂದು ಹೇಳುತ್ತಿದ್ದಾರೆ. 25 ಲಕ್ಷ ರೂಪಾಯಿ ಎಸ್ಟಿಮೇಟ್ ಕೂಡ ಮಾಡಿದ್ದಾರೆ. ಆದರೆ ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ. ಆಭಾಗಕ್ಕೆ ಹೋದರೆ ನೀವು ಎಂಎಲ್ಎ ಆಗಿ ಏನು ಮಾಡುತ್ತಿದ್ದೀರಿ ಎಂದು ಘೇರಾವ್ ಸಹ ಮಾಡಿದ್ದರು. ಮತ್ತೆ ಬಸ್‌ನ ಕಂಡಕ್ಟರ್ ಡ್ರೈವರ್‌ಗಳೂ ನನ್ನನ್ನು ಕ್ರಿಟಿಸೈಜ್ ಮಾಡುತ್ತಿದ್ದಾರೆ.

ಶ್ರೀ ಉಮೇಶ ಕತ್ತಿ(ಲೋಕೋಪಯೋಗಿ ಸಚಿವರು): ಮಧ್ಯಾಹ್ನದೊಳಗೆ ಇದರ ಬಗ್ಗೆ ವರದಿ ತರಿಸಿ ಉತ್ತರ ಕೊಡುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ನನ್ನ ಬೇಡಿಕೆಗಳು ಪರಿಷತ್ತಿನಲ್ಲಿ ಬರುತ್ತಿವೆ.

ಅಧ್ಯಕ್ಷರು: ತಾವು ಹೋಗಬಹುದು.

ಶ್ರೀ ಚಂದ್ರಶೇಖರ ನಾಯಕ್: ಅಧ್ಯಕ್ಷರೇ, ಇದು ಕಂದಾಯ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ. ಬ್ರಿಟಿಷರ ಕಾಲದಿಂದಲೂ ಶೋಷಣೆ.

ಅಧ್ಯಕ್ಷರು: ಈ ನೋಟೀಸನ್ನು ಸಂಬಂಧಿಸಿದ ಸಚಿವರಿಗೆ ಕಳಿಸಿಕೊಡುತ್ತೇನೆ, ನಾಳೆ ಪ್ರಸ್ತಾಪಿಸಿ.